

ಕರೆನ್ಸಿ ನೋಟುಗಳನ್ನು ಮುದ್ರಿಸುತ್ತದೆ. ಈ ಪದ್ಧತಿಯೇ ಕನಿಷ್ಠ ಕಾಪುನಿಧಿ ಪದ್ಧತಿ. ಆದ್ದರಿಂದ ನೂರು ರೂಪಾಯಿಗೆ ನಿಜವಾಗಿ ನೂರು ರೂಪಾಯಿ ಮೌಲ್ಯದ ಚಿನ್ನದ ಬೆಲೆ ಇರುವುದಿಲ್ಲ. ಆದರೂ ಅದು ನೂರು ರೂಪಾಯಿ ಮೌಲ್ಯವನ್ನು ಚಲಾವಣೆಯಲ್ಲಿರಿಸಬೇಕು. ಅದಕ್ಕಾಗಿ ಕಾನೂನಿನ ಭದ್ರತೆಯನ್ನು ರಿಸರ್ವ್ ಬ್ಯಾಂಕ್ ಗವರ್ನರ್ ಒದಗಿಸುತ್ತಾರೆ. ಆದ್ದರಿಂದ 'ಐ ಪ್ರಾಮಿಸ್ ಟು ಪೇ ದ ಬೇರರ್...' ಎಂದು ಬರೆದು ಸಹಿ ಹಾಕಿರುತ್ತಾರೆ.

ಕರೆನ್ಸಿ ನೋಟಿನಲ್ಲಿ 'ಐ ಪ್ರಾಮಿಸ್ ಟು ಪೇ...' ಎಂದು ಬರೆದಿರುವುದನ್ನು ನೋಡಿದಾಗ ಇಷ್ಟು ವಿಚಾರ ನಿಮಗೆ ಗೊತ್ತಿದೆ ಎಂದಾದರೆ ಅದು ಆನ್ವಯಿಕ ಕಲಿಕೆ. ಈ ರೀತಿ ವಿಚಾರವನ್ನು ಅರ್ಥ ಮಾಡಿಕೊಂಡದ್ದೇ ಆದರೆ ಕಲಿತ ವಿಚಾರವು ಜೀವನದಲ್ಲಿ ಎಂದೂ ಮರೆತು ಹೋಗುವುದಿಲ್ಲ. ಪರೀಕ್ಷೆಯು ಎಂದೂ ಒತ್ತಡವನ್ನಾಗಲಿ, ಭಯವನ್ನಾಗಲಿ ಸೃಷ್ಟಿಸುವುದಿಲ್ಲ. ಏಕೆಂದರೆ ಅನ್ವಯ ರೂಪದಲ್ಲಿ ಕಲಿಯಲು ತೊಡಗಿದಾಗ ಜ್ಞಾನದ ರಚನೆ ನಿಮ್ಮ ಒಳಗೆಯೇ ನಡೆಯುತ್ತದೆ.

ನೀವು ಬಸ್ಸಿನಲ್ಲಿ ಹೋಗುತ್ತಾ ಇರುತ್ತೀರಿ. ಚಾಲಕ ಬ್ರೇಕ್ ಬಳಸುತ್ತಾರೆ. ತಕ್ಷಣ ನೀವು ಮುಂದಕ್ಕೆ ಮುಗ್ಗರಿಸುತ್ತೀರಿ ಎಂದರೆ ನ್ಯೂಟನ್‌ನ ಚಲನೆಯ ಒಂದನೆಯ ನಿಯಮ ಅನ್ವಯಕ್ಕೆ ಬಂದಾಯಿತು. ನಿಯಮ ಏನು? 'ಒಂದು ಕಾಯದ ಮೇಲೆ ಬಲಪ್ರಯೋಗವಾದಾಗ ಮಾತ್ರ ಅದು ತನ್ನ ಸ್ಥಾನದಿಂದ ಚಲಿಸುತ್ತದೆ. ಇಲ್ಲದಿದ್ದರೆ ಅದು ಇದ್ದಲ್ಲೇ ಇರುತ್ತದೆ' ಎನ್ನುವುದು ನಿಯಮ. ಅನ್ವಯ – ಒಂದು ಫುಟ್‌ಬಾಲ್ ಇರುತ್ತದೆ. ಇದ್ದಲ್ಲೇ ಇರುತ್ತದೆ. ನೀವು ಒದೆಯುತ್ತೀರಿ. ಬಲ ಪ್ರಯೋಗವಾಯಿತು. ಆಗ ಅದು ಚಲಿಸುತ್ತದೆ. ಇಷ್ಟೇ. ಇನ್ನೆಂದೂ ನ್ಯೂಟನ್‌ನ ಚಲನೆಯ ಒಂದನೆಯ ನಿಯಮ ಮರೆಯುವುದಿಲ್ಲ.

ಸೂರ್ಯ ಮತ್ತು ಗ್ರಹಗಳ ಸಂಬಂಧ, ಗುರುತ್ವಾಕರ್ಷಣ ಶಕ್ತಿ, 'ಮೇಲೆಯೂ ಕೆಳಗೆಯೂ ಏನೂ ಇಲ್ಲ ಎಂದಾದರೆ ಭೂಮಿ ಯಾಕೆ ಬೀಳುವುದಿಲ್ಲ?' ಎಂಬೆಲ್ಲ ಗೊಂದಲಮಯ ಪ್ರಶ್ನೆಗಳನ್ನಿಟ್ಟುಕೊಂಡು ಕಡೆಗೆ ಸರಿಯಾಗಿ ಅರ್ಥವಾಗದೆ ಬಾಯಿಪಾಠ ಮಾಡಿಕೊಂಡು ಪರೀಕ್ಷೆಯಲ್ಲಿ ಒತ್ತಡ ಮಾಡಿಕೊಳ್ಳುವ ವಿದ್ಯಾರ್ಥಿಗಳಿರುತ್ತಾರೆ. ಇದು ಅರ್ಥವಾಗಬೇಕಾದರೆ ಅಷ್ಟೆಲ್ಲ ಕಷ್ಟವಿಲ್ಲ. ಒಂದು ಸಣ್ಣ ಕಲ್ಲಿಗೆ ಗಟ್ಟಿಯಾಗಿ ಟ್ವೈನ್ ನೂಲು ಕಟ್ಟಿ. ನೂಲಿನ ಬುಡವನ್ನು ನಿಮ್ಮ ಬೆರಳುಗಳಲ್ಲಿ ಹಿಡಿದುಕೊಂಡು ಎಡೆಬಿಡದೆ ಒಂದೇ ಆ್ಯಂಗಲ್‌ನಲ್ಲಿ 'ರೊಂಯ್ ರೊಂಯ್ ರೊಂಯ್' ಎಂದು ವೇಗವಾಗಿ ತಿರುಗಿಸಿ. ಕಲ್ಲು ಒಂದು ಗ್ರಹ ಎಂದು ಭಾವಿಸಿ. ನೂಲನ್ನು ಹಿಡಿದ ನಿಮ್ಮ ಕೈಬೆರಳುಗಳು ಸೂರ್ಯ ಎಂದು ಭಾವಿಸಿ. ನೂಲನ್ನು ಗುರುತ್ವಾಕರ್ಷಣ ಶಕ್ತಿ ಎಂದು ಭಾವಿಸಿ. ತಿರುಗುತ್ತಾ ಇರುವುದರಿಂದ ಭೂಮಿ ಕೆಳಗೆ ಬೀಳುವುದಿಲ್ಲ. ಅಷ್ಟೇ. ಇನ್ನು, ಭೂಮಿಯನ್ನು ಸೂರ್ಯನೇಕೆ ತನ್ನ ಕಡೆಗೆ ಸೆಳೆದು ನುಂಗುವುದಿಲ್ಲ? ಎಂಬ ಪ್ರಶ್ನೆ ಇದೆಯೇ? ಒಂದು ಹಗ್ಗ ಹಿಡಿದುಕೊಳ್ಳಿ. ನಿಮ್ಮ ಸ್ನೇಹಿತ ಇನ್ನೊಂದು ತುದಿಯನ್ನು ಹಿಡಿದುಕೊಳ್ಳಲಿ. ಸಮಾನ ಬಲದಿಂದ ಇಬ್ಬರೂ ಹಗ್ಗವನ್ನು ತಮ್ಮ ತಮ್ಮ ಕಡೆಗೆ ಎಳೆಯಿರಿ. ಆಗ ನೀವೆಲ್ಲಿ ಇರುತ್ತೀರಿ? ಇದ್ದಲ್ಲೇ ಇರುತ್ತೀರಿ. ನಿಮ್ಮಿಬ್ಬರಲ್ಲಿ ಒಬ್ಬ ಸೂರ್ಯ, ಒಬ್ಬ ಭೂಮಿ ಎಂದುಕೊಂಡರೆ ಮುಗಿಯಿತು. ಭೂಮಿಯನ್ನು ಸೂರ್ಯನೇಕೆ ಸೆಳೆದು ನುಂಗುವುದಿಲ್ಲ ಎಂದು ಗೊತ್ತಾಯಿತು.

ಕಲಿಯುವ ಪ್ರತಿಯೊಂದು ವಿಚಾರವನ್ನೂ ನೀವು ಚಟುವಟಿಕೆ ಮಾಡಲು ಆಗುವುದಿಲ್ಲ. ಆದರೆ ಚಟುವಟಿಕೆಯ ಕಲ್ಪನೆ ಮಾಡಿಕೊಳ್ಳಬಹುದು. ಮೇಲೆ ಹೇಳಿದ ಚಟುವಟಿಕೆಗಳನ್ನು ಮಾಡಬೇಕಾಗಿಲ್ಲ. ಬದಲು ಕಲ್ಪಿಸಿಕೊಂಡರೆ ಸಾಕು. ಓದಿದ ವಿಷಯಗಳು ಮಾನಸಿಕ ಚಟುವಟಿಕೆಗೊಳಗಾಗಿ ಅನ್ವಯ ಕಲಿಕೆ ಸಂಭವಿಸುತ್ತದೆ. ಗಣಿತದಲ್ಲಿ ಆಯತವನ್ನು ಮಾಡುತ್ತೀರಿ. ಸುಮ್ಮನೇ ಮನೆಯ ಬಾಗಿಲನ್ನು ನೋಡಿ, ಆಯತ ಎಂದರೆ ಏನು ಎಂದು ಗೊತ್ತಾಗಿ ಆಯಿತು. 'ಲಂಡನ್ ಬ್ರಿಜ್ ಫಾಲಿಂಗ್ ಡೌನ್ ಫಾಲಿಂಗ್ ಡೌನ್' ಎಂದು ಕವಿತೆಯನ್ನು ಬಾಯಿ ಪಾಠ ಮಾಡುತ್ತೀರಿ. ಬಾಯಿಪಾಠ ಮಾಡುವಾಗ ಒಂದು ದೊಡ್ಡ ಸೇತುವೆ ಮುರಿದು ಬೀಳುತ್ತಿರುವ ದೃಶ್ಯವನ್ನು ಮನಸಿನಲ್ಲಿ ಕಲ್ಪಿಸಿಕೊಳ್ಳಿ (ಕವಿತೆಗೆ ಅಷ್ಟೇ ಅರ್ಥವಿರುವುದಲ್ಲ). ಆ ಇಡೀ ಕವಿತೆಯನ್ನು ಕಲಿಯುವುದು ತುಂಬ ಸುಲಭವಾಗುತ್ತದೆ. 'ಮಾರಿಗೌತಣವಾಯ್ತು ನಾಳಿನ ಭಾರತವು ಚತುರಂಗಬಲದಲಿ' ಓದಿಕೊಳ್ಳುವಾಗ ಒಂದು ಹೆಣ್ಣು ದೆವ್ವ ಬಂದು ಹೆಣಗಳನ್ನು ತಿನ್ನುತ್ತಿರುವುದನ್ನು ಕಲ್ಪಿಸಿಕೊಂಡು ಓದಲು ತೊಡಗಿ. ಇಡೀ ಪದ್ಯ ಸುಲಭವಾಗಿ ಅರ್ಥವಾಗಿಬಿಡುತ್ತದೆ. ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಎಂದು ಬರುತ್ತದೆ. ಸುಮ್ಮನೇ ಏನಾದರೊಂದನ್ನು ದೇವರು ಎಂದು ಕಲ್ಪಿಸಿಕೊಳ್ಳಿ. ದೇವರಿಂದಲೇ ಬಂದವನು ನಾನಾಗಿರುವುದರಿಂದ ದೇವರು ಮತ್ತು ನಾನು ಒಂದೇ ಎಂದುಕೊಳ್ಳಿ, ಅದೇ ಅದ್ವೈತ. ದೇವರೇ ಬೇರೆ, ನಾನೇ ಬೇರೆ ಎಂದುಕೊಳ್ಳಿ; ಅದೇ ದ್ವೈತ. ದೇವರೇ ಬೇರೆ, ನಾನೇ ಬೇರೆ, ನನ್ನ ಮತ್ತು ದೇವರ ನಡುವೆ ಪ್ರಕೃತಿ ಇದೆ ಎಂದುಕೊಳ್ಳಿ; ಅದೇ ವಿಶಿಷ್ಟಾದ್ವೈತ. (ತಾತ್ವಿಕವಾಗಿ ಇವುಗಳ ಅರ್ಥ ಬಹಳ ಇವೆ. ಸುಲಭವಾಗಿ ಅರ್ಥವಾಗಲು ಇಷ್ಟು ಸಾಕು.)

ಎಲ್ಲವನ್ನೂ ಹೀಗೆ ಅನ್ವಯಿಸಿಕೊಂಡೇ ಕಲಿಯಬೇಕಾಗಿಲ್ಲ. ಪ್ರತಿಯೊಂದು ಪಾಠದಲ್ಲೂ ಮೂಲ ಪರಿಕಲ್ಪನೆ ಎಂದು ಇರುತ್ತದೆ. ಆ ಮೂಲ ಪರಿಕಲ್ಪನೆಯನ್ನು ಅನ್ವಯಿಸಿ ಕಲಿತುಕೊಂಡರೆ ಸಾಕು. ಉಳಿದೆಲ್ಲ ವಿವರಗಳು ಓದಿದ ಕೂಡಲೇ ಅರ್ಥವಾಗಲು ಮೂಲ ಪರಿಕಲ್ಪನೆಯನ್ನು ಅರ್ಥ ಮಾಡಿಕೊಂಡರೆ ಸಾಕಾಗುತ್ತದೆ. ಇತಿಹಾಸವನ್ನು ನೀವು ಓದುತ್ತೀರಿ. ಹಿಂದೆ ಆಗಿಹೋದ ಮನುಷ್ಯರು ಏನು ಮಾಡಿದರು ಎನ್ನುವುದೇ ಇತಿಹಾಸ. ಇಡೀ ಇತಿಹಾಸದ ಮೂಲ ಪರಿಕಲ್ಪನೆಯನ್ನು ಯೋಚಿಸಿ. ನೀವು ಏನೆಲ್ಲ ಯೋಚಿಸಿರುತ್ತೀರೊ ಅದೆಲ್ಲವನ್ನೂ ಮಾಡಿರುತ್ತೀರಾ? ಇಲ್ಲ. ಏನೆಲ್ಲ